

‘ರಂಗಯ್ಯ ರೆಡ್ಡಿ ಗೊತ್ತಲ್ವಾ, ಅದೇ ರೆಸಿಡೆನ್ಸಿ ರೋಡಿನಲ್ಲಿ ದೊಡ್ಡ ಮಾಲ್ ಇದೆ ನೋಡು ಅವರೇ, ಅವರು ಒಂದು ದೊಡ್ಡ ಆರ್ಡರ್ ಕೊಡುವುದರಲ್ಲಿದ್ದಾರೆ. ಅವರನ್ನು ಒಪ್ಪಿಸಬೇಕಾದರೆ ಸಾಕು ಬೇಕಾಯಿತು ಮಾರಾಯ್ತಿ. ಅವರು ಆರ್ಡರ್ ಕೊಡುವಾಗ ನೀನಿದ್ದರೆ ಚೆನ್ನಾಗಿರುತ್ತಿತ್ತು. ಎಷ್ಟಾದರೂ ನೀನು ನನ್ನ ಲಕ್ಕಿ ಚಾರ್ಮ್, ನಾಳೆಯೇ ಹೊರಟು ಬಾ’.

‘ಇಲ್ಲ ಪ್ರಭು, ನಂದು ಬೆಕ್ಕಿನ ಕಣ್ಣು, ಎನಾದರೂ ಪ್ರಾಬ್ಲಂ ಆಗಬಹುದು, ಆಲ್ ದಿ ಬೆಸ್ಟ್’ ಎನ್ನುತ್ತಾ ಫೋನ್ ಇಟ್ಟೆ. ಎರಡೇ ನಿಮಿಷದಲ್ಲಿ ಮತ್ತೆ ಪ್ರಭುವಿನ ಫೋನ್. ‘ವಿದೂ... ಹಾಗಲ್ಲ, ಆರ್ಡರ್ ಕೊಡಬೇಕಾದರೆ ನೀನೂ ಇರಬೇಕೆಂದರು ರೆಡ್ಡಿಯವರು, ನೀನಿಲ್ಲಾಂದ್ರೆ ಇಲ್ಲಾ ಅಂತೆ’ ಎಂದ ಮೆಲ್ಲನೆ. ಓಹೋ ಅಸಲಿ ವಿಷಯವಿದು ಎಂದುಕೊಳ್ಳುತ್ತಿರುವಾಗಲೇ ‘ವಿದೂ... ಏನೂ ಆಲೋಚನೆ ಮಾಡ್ತಾ ಇದ್ದಿ? ನಿನ್ನ ಗಂಡಂಗೆ ಒಳ್ಳೆಯದಾಗಬೇಕು ತಾನೇ? ನಾಳೆ ಬೆಳಗ್ಗಿನ ವಿಮಾನಕ್ಕೆ ಬುಕ್ ಮಾಡ್ತೀನಿ, ಮಂಗಳೂರಿನಲ್ಲಿ ಹತ್ತು’.

‘ಅದೇನು ಬೇಡ, ನಾನು ನಾಳೆಯ ರಾತ್ರಿ ಬಸ್ಸಿಗೆ ಹೊರಟು ಬರ್ತೀನಿ’ ಎಂದೆ. ಕರೆದುಕೊಂಡು ಹೋಗಲು ಬಸ್ ಸ್ಟಾಂಡಿಗೆ ಪ್ರಭುವೇ ಬಂದಿದ್ದ. ಸ್ವಲ್ಪ ಸಣ್ಣಗಾಗಿದ್ದಾನೆ ಎನಿಸಿತು. ಮನೆಗೆ ಹೋದರೆ ನಾನು ಮದುವೆಯಾಗಿ ಹೊಸ್ತಿಲು ದಾಟಿ ಒಳಬಂದ ಮನೆ... ಬದುಕನ್ನು ಕಲಿಸಿದ ಮನೆ ಈಗ ಅಪರಿಚಿತವೆನಿಸಿತು. ಆಫೀಸಿಗೆ ಬಂದರೆ ಎಲ್ಲವೂ ಹೊಸ ಮುಖಗಳು. ಹಳಬರು ಎಲ್ಲಿ ಹೋದರೋ? ವಾಚ್ಮನ್ ತಾತ ಮಾತ್ರ ಮೊದಲಿನವನೇ. ಅವನನ್ನು ಮಾತಾಡಿಸಿದೆ, ಮೆಲ್ಲನೆಂದ, ‘ಎಲ್ಲರನ್ನು ಬಿಡಿಸಿದರು, ಹೊಸಬರನ್ನು ಇಟ್ಟಿದ್ದಾರೆ ಕಣವ್ವ. ಆಗಾಗ ಜ್ಯೋತಿಷಿಯೊಬ್ಬರು ಬರುತ್ತಿರುತ್ತಾರೆ. ಸಂಬಳ ಕೊಡದೆ ಎರಡು ತಿಂಗಳಾಯಿತು. ನೀವಿಲ್ಲದೆ ಸರಿಹೋಗೊಲ್ಲ.’ ಈ ಮಾತಿನಿಂದ ಪರಿಸ್ಥಿತಿ ಅರ್ಥವಾಯಿತು.

ಮುಖದಲ್ಲಿ ನಗುವರಳಿಸಿಕೊಂಡೇ ಬಂದರು ರೆಡ್ಡಿ, 2 ಕೋಟಿಯ ರೂಪಾಯಿಯ ಆರ್ಡರ್ ಮುಂದಿಡುತ್ತಾ, ‘ಪ್ರತೀ ತಿಂಗಳು 15 ಲಕ್ಷದ ಆರ್ಡರ್ ಪೂರೈಸಬೇಕು.